ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ
ಸಿ.ಸಿ. ನಂಬ್ರ:2818/2019

ಚಾಸಾ:6 ಪ್ರಾಸಾ:5

ದಿನಾಂಕಃ 27.10.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಪ್ರಕಾಶ್ ಚಂದನ್ |
| ತಂದೆಯ ಹೆಸರು | : | ಪಿ.ಎ. ಚಂದನ್ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ವ್ಯವಹಾರ |
| ವಾಸ ಸ್ಥಳ | : | ಹೆಮ್ಮಾಡಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ**

ಸಾಕ್ಷಿಗೆ ನಿಪಿ-2, 3, 5, 7, 8ನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-2(ಬಿ), 3(ಬಿ), 5(ಬಿ), 7(ಬಿ), 8(ಬಿ) ಎಂದು ಗುರುತಿಸಲಾಯಿತು. ನಿಪಿ-4 ಮತ್ತು 6 ರಲ್ಲಿ ತನ್ನನ್ನು ನೋಡಿ ಗುರುತಿಸಿರುತ್ತಾರೆ. ನಿಪಿ-12 ಮತ್ತು 13ನ್ನು ನೋಡಿ ಗುರುತಿಸಿರುತ್ತಾರೆ. ಸದ್ರಿ ಸಹಿಗಳನ್ನು ದಿಃ 12-08-1997 ರಂದು ಚಾಸಾ-1ರವರ ಮನೆ ಬಳಿ ಮಾಡಿರುತ್ತೇನೆ. ಆ ಸಮಯದಲ್ಲಿ ಚಾಸಾ-1, ಆಕೆಯ ತಂದೆ ಮತ್ತು ಮಕ್ಕಳು ಇದ್ದರು. ಕ್ರಮಗಳನ್ನು ಬೆಳಗ್ಗೆ 9 ರಿಂದ 10 ಗಂಟೆ ಸಮಯದಲ್ಲಿ ಜರುಗಿಸಿರುತ್ತಾರೆ. ಮೇಲೆ ಗುರುತಿಸಿದ ಪೋಟೋದಲ್ಲಿ ನಾನು ಮತ್ತು ಚಾಸಾ-7 ರವರು ಕಂಡು ಬರುತ್ತೇವೆ.

ಮತ್ತೊಂದು ಪಂಚನಾಮೆಯನ್ನು ಮಾವಿನಕಟ್ಟೆ ಜಂಕ್ಷನ್ ನಲ್ಲಿ ಮಾಡಿರುತ್ತಾರೆ. ಆಗ ಮೇಲೆ ಹೇಳಿದ ವ್ಯಕ್ತಿಗಳು ಇದ್ದರು. ಜಾಗವನ್ನು ಚಾಸಾ-1 ರವರು ತೋರಿಸಿರುತ್ತಾರೆ. ಕ್ರಮವನ್ನು 11 ರಿಂದ 11-30ರವರೆಗೂ ಜರುಗಿಸಿರುತ್ತಾರೆ.

ಇನ್ನೊಂದು ಪಂಚನಾಮೆಯನ್ನು 11-30 ರಿಂದ 12 ಗಂಟೆಯವರೆಗೂ ಗುಲ್ವಾಡಿಯ ಆರೋಪಿಯ ಮನೆಯಲ್ಲಿ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಜರುಗಿಸಿರುತ್ತಾರೆ. ಮತ್ತೊಂದು ಪಂಚನಾಮೆಗೆ ದಿಃ22-08-1997 ರಂದು ಸಹಿಯನ್ನು ಠಾಣೆಯಲ್ಲಿ ಮಾಡಿರುತ್ತೇನೆ. ಠಾಣೆಯಲ್ಲಿ ವಿಚಾರಣೆ ಮಾಡಿ ಆಮಂತ್ರಣ ಪತ್ರ ಮತ್ತು ಪೊಟೋಗಳನ್ನು

ಚಾಸಾ-1 ರವರು ಹಾಜರುಪಡಿಸಿರುತ್ತಾರೆ. ಸದ್ರಿ ಕ್ರಮವನ್ನು 12 ಗಂಟೆಗೆ ನನ್ನ ಮತ್ತು ಚಾಸಾ-7 ರವರ ಸಮಕ್ಷಮ ಜರುಗಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಬಿ ಆರ್ ಎನ್ ರವರಿಂದಃ</u>**

ನಮ್ಮ ಮನೆಯಿಂದ ಚಾಸಾ-1 ರವರ ಮನೆ ಅರ್ಧ ಕಿ.ಮೀ ದೂರದಲ್ಲಿದೆ. ಚಾಸಾ-2 ರವರು 30 ವರ್ಷಗಳ ಪರಿಚಯ. ಸ್ಥಳಕ್ಕೆ ಬರುವಂತೆ ಪೊಲೀಸರು ಸೂಚಿಸಿರುತ್ತಾರೆ. ಪೊಲೀಸರು ನಮ್ಮ ಹೊಟೇಲ್ ಗೆ ಬಂದು ಕರೆದಿರುತ್ತಾರೆ. ಚಾಸಾ-1 ರವರ ಮನೆಯ ಸುತ್ತಮುತ್ತಲೂ ಸಾಕಷ್ಟು ಮನೆಗಳು ಇವೆ ಎಂದರೆ ಸರಿ. ಗುಲ್ವಾಡಿ ಮನೆಯ ಅಕ್ಕಪಕ್ಕದಲ್ಲಿ ಎಷ್ಟು ಮನೆಗಳು ಇವೆ ಎಂದು ತಿಳಿದಿಲ್ಲ. ಅಕ್ಕಪಕ್ಕದಲ್ಲಿ ಆರೋಪಿತರ ಸಂಬಂಧಿಕರ 2-3 ಮನೆಗಳು ಇರುತ್ತವೆ. ಮಾವಿನಕಟ್ಟೆ ಜಂಕ್ಷನಲ್ಲೂ ಸುತ್ತುಮುತ್ತಲೂ ಮನೆಗಳು ಇರುತ್ತವೆ.

ಪ್ರಕರಣ ದಾಖಲಾದ 10 ದಿನಗಳ ನಂತರ ಠಾಣೆಗೆ ಹೋಗಿರುತ್ತೇನೆ. ಠಾಣೆಯಲ್ಲಿ ಒಂದು ಸಹಿ ಮಾಡಿರುತ್ತೇನೆ. ಮೇಲೆ ಗುರುತಿಸಿದ ಎಲ್ಲಾ ಸಹಿಗಳನ್ನು ಠಾಣೆಯಲ್ಲಿ ಮಾಡಿರುತ್ತೇನೆ ಎಂದರೆ ನಿಖರವಾಗಿ ನೆನಪಿಲ್ಲ. ಮೇಲೆ ಗುರುತಿಸಿದ ಯಾವ ದಾಖಲೆಗಳಲ್ಲಿ ಏನು ಬರೆದಿದೆ ಎಂದು ಈಗ ಸರಿಯಾಗಿ ನೆನಪಿಲ್ಲ. ಆಮಂತ್ರಣ ಪತ್ರಿಕೆಯಲ್ಲಿ ಏನು ಬರೆದಿತ್ತು ಎಂದು ನೆನಪಿಲ್ಲ. ಸದ್ರಿ ದಿನ ನಾನು ಚಾಸಾ-1 ರವರ ಮದುವೆಗೆ ಹಾಜರಾಗಿದ್ದ ಬಗ್ಗೆ ನನಗೆ ನೆನಪಿಲ್ಲ. ಚಾಸಾ-2 ರವರು ನನ್ನ ಆತ್ಮೀಯರಾದ ಕಾರಣ ಅವರ ಮಗಳಾದ ಚಾಸಾ-1 ರವರಿಗೆ ಸಹಾಯ ಮಾಡಲು ಸಂಪೂರ್ಣ ವಿಚಾರ ತಿಳಿದುಕೊಳ್ಳದೆ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ-7 ರವರು ಚಾಸಾ-1ರವರ ಸಂಬಂಧಿಕರು ಎಂದರೆ ಸರಿ. ನಾನು ಸುಮಾರು 30 ವರ್ಷದ ಆತ್ಮೀಯ ಎಂದರೆ ಸರಿ. ಅಲ್ಲಿನ ಸ್ಥಳೀಯ ಸ್ವತಂತ್ರ ಸಾಕ್ಷಿದಾರರನ್ನು ನನ್ನ ಸಮಕ್ಷಮ ತನಿಖೆ ಮಾಡಿರುವುದಿಲ್ಲ.

<u>**ಮರು ವಿಚಾರಣೆಃ** ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**